ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಅಭಿಮತ | ಸಿಎಫ್‌ಟಿಆರ್‌ಐ ನಲ್ಲಿ ಅಂಬೇಡ್ಕರ್ ಜಯಂತಿ

# ಅನ್ಯಾಯ ಪ್ರಕರಣಗಳಿಗೆ ಸಮಾಜವೇ ಕಾರಣ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಪ್ರಸ್ತುತ ನಮ್ಮ ಸುತ್ತಲೂ ಕಾಣುವ ಅನ್ಯಾಯಕ್ಕೆ ಸಮಾಜವೇ ಕಾರಣ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಹೇಳಿದರು.

ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಮಂಗಳವಾರ ಸಿಎಫ್‌ಟಿಆರ್‌ಐ ಪ.ಜಾತಿ, ವರ್ಗಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಮಾತನಾಡಿದರು.

ರಾಜಕಾರಣಿಗಳು, ಅಧಿಕಾರಿಗಳು ಭ್ರಷ್ಟಾರಾಗಲು ಒಂದು ರೀತಿಯಲ್ಲಿ ಸಮಾಜವೇ ಕಾರಣ. ಚುನಾವಣೆಯಲ್ಲಿ ಆಸೆ, ಅಮೀಷಗಳಿಗೆ ಒಳಗಾದರೆ ರಾಜಕಾರಣಿಯನ್ನು ಪ್ರಶ್ನಿಸುವ ನೈತಿಕತೆ ಇರುವುದಿಲ್ಲ ಎಂದರು. ಹೀಗಾಗಿ ಪ್ರಸ್ತುತ ನಮ್ಮ ಸುತ್ತಲೂ ಕಾಣುವ ಸಾಮಾಜಿಕ ಅನ್ಯಾಯಕ್ಕೆ ಸಮಾಜವೇ ಕಾರಣವಾಗಿದೆ. ಜನರಲ್ಲಿ ಸಂಪತ್ತು ಮತ್ತು ಅಧಿಕಾರದ ಬಾಯಾರಿಕೆ ಹೆಚ್ಚಾಗಿದೆ. ಮಾನವೀಯ ಮೌಲ್ಯಗಳು ಕಡಿಮೆಯಾಗಿವೆ ಎಂದರು. ಮಾನವೀಯ ಮೌಲ್ಯಗಳಿಂದ ಕೂಡಿದ ಜೀವನದಿಂದ ಮಾತ್ರ ಡಾ.ಬಿ.ಆರ್. ಅಂಬೇಡ್ಕರ್ ಕನಸಿನ ಭಾರತ ನಿರ್ಮಾಣ ಮಾಡಲು ಸಾಧ್ಯ ಎಂದು ಹೇಳಿದರು.

ಅಂಬೇಡ್ಕರ್ ಸೇವಾ ಕಾರ್ಯ ಮತ್ತು ವಿಚಾರ ಧಾರೆಗಳನ್ನು ಎಲ್ಲರೂ ಸದಾ ಸ್ಮರಿಸುವುದರೊಂದಿಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.ಪಾಲಕರು ಮಕ್ಕಳಿಗೆ ನೈತಿಕ ಪಾಠಗಳನ್ನು ಕಲಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು, ನೈತಿಕ ಶಿಕ್ಷಣವನ್ನು ಹಿಂದೆ ಸಮಾಜದಿಂದ ಕಲಿಯುತ್ತಿದ್ದೆವು. ಹಿಂದೆ ಕಾನೂನು ರಚನೆ ಅಗದಿದ್ದರೆ ಸಮಾಜದ ಭಯ ಇತ್ತು. ಆದರೆ ಇಂದು ಕಾನೂನು, ನ್ಯಾಯಾಲಯ ಇದ್ದರೆ ಜನರಲ್ಲಿ ಭಯ ಇಲ್ಲ. ಅದರಿಂದ ಅಪರಾಧ ಕೃತ್ಯಗಳು ಎಗ್ಗಿಲ್ಲದೆ ನಡೆಯುತ್ತಿದೆ ಎಂದು ಬೇಸರಿಸಿದರು.



ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಎನ್. ಸಂತೋಷ್ ಹೆಗ್ಡೆ ಉದ್ಘಾಟಿಸಿದರು. ಕೆ.ಜ್ಯೋತಿ, ಡಾ.ಪಿ.ಶಿವರಾಜು, ಡಾ.ಗಿರಿಧರ್ ಪರ್ವತಂ, ಶಿವಸ್ವಾಮಿ, ಎಸ್.ಶಿವಪ್ಪ ಇದ್ದರು.

**ಸೀಮಿತ ಮಾಡಬೇಡಿ:** ರಾಜ್ಯ ಸರ್ಕಾರದ ಕೈ ಮಗ್ಗ ಮತ್ತು ಜವಳಿ ಇಲಾಖೆ ಆಯುಕ್ತೆ ಕೆ.ಜ್ಯೋತಿ ಮಾತನಾಡಿ, ಜನರಲ್ಲಿ ಅಸಹನೆ, ಕೋಪದೊಂದಿಗೆ ಪ್ರತಿಸ್ಪರ್ಧೆ ಮನೋಭಾವ ಹೆಚ್ಚಾಗಿದೆ, ಹಣ ಸಂಪಾದನೆಯೇ ಯಶಸ್ಸು ಎಂಬಂತೆ ಆಗಿದೆ. ಅಂಬೇಡ್ಕರ್ ಅವರನ್ನು ದಲಿತರ ಸೂರ್ಯ ಎಂದು ಹೇಳುವ ಮೂಲಕ ಕೇವಲ ಒಂದು ಜಾತಿಗೆ ಸಿಮೀತಗೊಳಿಸಲಾಗಿದೆ. ಅವರು ಜಗತ್ತಿಗೆ ಬೆಳಕು ನೀಡಿದ ಸೂರ್ಯ, ಅವರನ್ನು ಯಾವುದೇ ಒಂದು ಜಾತಿಗೆ ಸಿಮೀತಗೊಳಿಸಬಾರದು ಎಂದು ಮನವಿ ಮಾಡಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ದೇಶದ ಜನತೆ ನೆಮ್ಮದಿಯಿಂದ ಸುಭಿಕ್ಷವಾಗಿ ಬದುಕಲು ಅಂಬೇಡ್ಕರ್ ಅವರೇ ಕಾರಣವಾಗಿದ್ದಾರೆ. ಅವರು ನಮ್ಮ ಶಕ್ತಿಯಾಗಿದ್ದಾರೆ ಎಂದು ಹೇಳಿದರು. ಸಾಹಿತಿ ಡಾ.ಸಿ.ನಾಗಣ್ಣ, ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಸಿಎಫ್‌ಟಿರ್‌ಐ ಎಸ್ಸಿ, ಎಸ್ಟಿ ನೌಕರರ ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಶಿವಪ್ಪ ಅವರನ್ನು ಸನ್ಮಾನಿಸಲಾಯಿತು. ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ ಅಧ್ಯಕ್ಷತೆ ವಹಿಸಿದ್ದರು. ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಸ್ವಾಮಿ ಇದ್ದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

# ಮಾನವೀಯ ಮೌಲ್ಯದಿಂದ ಅಂಬೇಡ್ಕರ್ ಕಂಡ ಭಾರತ ಸಾಧ್ಯ

■ **ವಿಕ ಸುದ್ದಿಲೋಕ** ಮೈಸೂರು

ಮಾನವೀಯ ಮೌಲ್ಯಗಳಿಂದ ಕೂಡಿದ ಜೀವನದಿಂದ ಮಾತ್ರ ಡಾ.ಬಿ.ಆರ್. ಅಂಬೇಡ್ಕರ್ ಕನಸಿನ ಭಾರತ ನಿರ್ಮಾಣ ಮಾಡಲು ಸಾಧ್ಯ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಹೇಳಿದರು.

ನಗರದ ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಸಿಎಫ್‌ಟಿಆರ್‌ಐನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವದಲ್ಲಿ ಮಾತನಾಡಿದರು.

''ಅಂಬೇಡ್ಕರ್ ಅವರ ಸೇವೆ ಕಾರ್ಯ ಮತ್ತು ವಿಚಾರಧಾರೆಗಳನ್ನು ಎಲ್ಲರೂ ಸದಾ ಸ್ಮರಿಸುವುದರೊಂದಿಗೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು,'' ಎಂದರು.

''ಪ್ರಸ್ತುತ ನಮ್ಮ ಸುತ್ತಲೂ ಕಾಣುವ ಸಾಮಾಜಿಕ ಅನ್ಯಾಯಕ್ಕೆ ಸಮಾಜವೇ ಕಾರಣವಾಗಿದೆ. ಜನರಲ್ಲಿ ಸಂಪತ್ತು ಮತ್ತು ಅಧಿಕಾರದ ಬಾಯಾರಿಕೆ ಹೆಚ್ಚಾಗಿದೆ. ಮಾನವೀಯ ಮೌಲ್ಯಗಳು ಕಡಿಮೆಯಾಗಿದ್ದು, ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ,'' ಎಂದರು.

ರಾಜ್ಯ ಸರಕಾರದ ಕೈ ಮಗ್ಗ ಮತ್ತು ಜವಳಿ ಇಲಾಖೆಯ ಆಯುಕ್ತೆ ಕೆ.ಜ್ಯೋತಿ ಮಾತನಾಡಿ,'' ಜನರಲ್ಲಿ ಅಸಹನೆ, ಕೋಪದೊಂದಿಗೆ ಪ್ರತಿಸ್ಪರ್ಧೆ ಮನೋಭಾವ ಹೆಚ್ಚಾಗಿದ್ದು, ಕಾನೂನಿನ ಭಯವೇ ಇಲ್ಲದಂತೆ ಆಗಿದೆ. ಹಣ ಸಂಪಾದನೆಯೇ ಯಶಸ್ಸು ಎಂಬಂತೆ ಆಗಿದೆ '' ಎಂದರು.

''ಅಂಬೇಡ್ಕರ್ ಅವರನ್ನು ದಲಿತರ ಸೂರ್ಯ ಎಂದು ಹೇಳುವ ಮೂಲಕ ಕೇವಲ ಒಂದು ಜಾತಿಗೆ ಸೀಮಿತಗೊಳಿಸಲಾಗಿದೆ. ಅವರು ಜಗತ್ತಿಗೆ ಬೆಳಕು ನೀಡಿದ ಸೂರ್ಯ, ಅವರನ್ನು ಯಾವುದೇ ಒಂದು ಜಾತಿಗೆ ಸೀಮಿತಗೊಳಿಸಬಾರದು,'' ಎಂದು ಮನವಿ ಮಾಡಿದರು.

ಸಾಹಿತಿ ಡಾ.ಸಿ.ನಾಗಣ್ಣ, ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಸಿಎಫ್‌ಟಿಆರ್‌ಐ ಎಸ್‌ಸಿ,ಎಸ್ಟಿ ವರ್ಗಗಳ ನೌಕರರ ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಶಿವಪ್ಪ ಅವರನ್ನು ಸನ್ಮಾನಿಸಲಾಯಿತು. ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಸ್ವಾಮಿ ಇದ್ದರು.




ನಗರದ ಸಿಎಫ್‌ಟಿಆರ್‌ಐಯಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯುತ್ಸವವನ್ನು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಉದ್ಘಾಟಿಸಿದರು.

# ದಿಢೀರ್ ಶ್ರೀಮಂತ ಸಮಾಜ ಅಕ್ರಮ ಸಂಪಾದನೆಯಿಂದಲೇ ನಿರ್ಮಾಣವಾದದ್ದು!

**● ನಿವೃತ್ತ ಲೋಕಾಯುಕ್ತ ಡಾ.ಎನ್.ಸಂತೋಷ್‌ಹೆಗ್ಡೆ ವಿಷಾದ ● ಸಿಎಫ್‌ಟಿಆರ್‌ಐನಲ್ಲಿ ಡಾ.ಅಂಬೇಡ್ಕರ್ ಜಯಂತಿ**




ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿಯಲ್ಲಿ ಹಿರಿಯ ಸಾಹಿತಿ ಡಾ.ಸಿ.ನಾಗಣ್ಣ, ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಸಿಎಫ್‌ಟಿಆರ್‌ಐ ಎಸ್ಸಿ, ಎಸ್ಟಿ ವರ್ಗಗಳ ನೌಕರರ ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಶಿವಪ್ಪ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಏ.14(ಎಸ್‌ಪಿಎನ್)– ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅಳವಡಿಸಿಕೊಂಡಿದ್ದ 'ತೃಪ್ತಿ' ಮತ್ತು 'ಮಾನವೀಯ ಮೌಲ್ಯ'ಗಳನ್ನು ಇತರರೂ ಅನುಸರಿಸಿದಾಗ ಮಾತ್ರ ಸಾಮಾಜಿಕವಾಗಿ ಭಾರತ ಸುಂದರ ದೇಶವಾಗಲು ಸಾಧ್ಯ ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಡಾ.ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಮೈಸೂರು ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಸಿಎಫ್‌ಟಿಆರ್‌ಐನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಸಮಾರಂಭದಲ್ಲಿ ಭಾಗವಹಿಸಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಜನಸಾಮಾನ್ಯರು ಅಂಬೇಡ್ಕರ್ ಅವರ ಸೇವಾ ಕಾರ್ಯ ಮತ್ತು ವಿಚಾರ ಧಾರೆಗಳನ್ನು ಸದಾ ಸ್ಮರಿಸಿ, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ನಮ್ಮ ಸುತ್ತಲೂ ಕಾಣುವ ಸಮಾಜ ಶ್ರೀಮಂತವಾಗಿದೆ. ಅದು ಅಕ್ರಮ ಮಾರ್ಗದಲ್ಲಿ ಗಳಿಸಿದ ಸಂಪಾದನೆಯಲ್ಲಿ ದಿಢೀರ್ ಉದ್ಭವಿಸಿದ ಶ್ರೀಮಂತ ಸಮಾಜ. ಕಾನೂನು ವ್ಯಾಪ್ತಿ ಯಲ್ಲಿ ಸಂಪತ್ತುಗಳಿಸಿ, ಶ್ರೀಮಂತರಾದ ವರ ಸಂಖ್ಯೆ ವಿರಳ. ಈ ಸಾಮಾಜಿಕ ಅನ್ಯಾಯಕ್ಕೆ ಸಮಾಜವೇ ಕಾರಣ. ಅಂತೆಯೇ ಇಂದಿನ ಸಮಾಜದಲ್ಲಿ 'ಸಂಪತ್ತು' ಮತ್ತು 'ಅಧಿಕಾರ' ದಾಹ ಹೆಚ್ಚಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು, ಕಡು ಬಡತನದಲ್ಲಿ ಹುಟ್ಟಿದರೂ, ತನ್ನ ಸುತ್ತ ಕ್ರೂರ ಸಾಮಾಜಿಕ ವ್ಯವಸ್ಥೆಯಿದ್ದರೂ ಆ ಸಮಾಜದ ನಡುವೆ ಬದುಕಿ, ಅಪಾರ ಜ್ಞಾನ ಸಂಪತ್ತು ಗಳಿಸಿದ್ದರು. ಇದು ಅದರ ಫಲವಾಗಿ ಅವರು ನೀಡಿರುವ ಸಂವಿಧಾನದ ನೆರಳಿನಲ್ಲಿ ಸುಂದರ ಬದುಕು ಕಟ್ಟಿಕೊಂಡಿದ್ದೇವೆ. ಇದಕ್ಕೆ ನಮ್ಮ ಅನೇಕ ಪೂರ್ವಜರ ಶ್ರಮವಿದೆ. ಹಾಗಾಗಿ ಭಾರತ ಪ್ರಗತಿ ಹೊಂದಿದ ದೇಶವಾಗಿ ಮುಂಚೂಣಿಯಲ್ಲಿದೆ ಎಂದು ಬಣ್ಣಿಸಿದರು.

ಪ್ರಸ್ತುತ ನಗರ ಪ್ರದೇಶದಲ್ಲಿ ಪೋಷಕರಿಬ್ಬರೂ ಹೊರಗಡೆ ಕೆಲಸಕ್ಕೆ ಹೋಗುವ ಪರಿಸ್ಥಿತಿಯಿದೆ. ಪೋಷಕರ ಅನುಪಸ್ಥಿತಿಯಲ್ಲಿ ಮಕ್ಕಳು ಜೀವನ ಕಟ್ಟಿಕೊಳ್ಳಬೇಕಾದ ಸನ್ನಿವೇಶ ನಗರ ಪ್ರದೇಶದಲ್ಲಿದೆ. ಈ ಅವಧಿಯಲ್ಲಿ ಅವರು (ಮಕ್ಕಳು) ಒಳ್ಳೆಯ ಗುಣಗಳನ್ನಾದರೂ ಬೆಳೆಸಿಕೊಳ್ಳಬಹುದು. ಇಲ್ಲವೇ ಕೆಟ್ಟ ಗುಣಗಳನ್ನಾದರೂ ಬೆಳೆಸಿಕೊಳ್ಳಬಹುದು. ಇದು ಪರಿಸರದ ಮೇಲೆ ಅವಲಂಬಿತವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಪೋಷಕರು ತಮ್ಮ ಮಕ್ಕಳಿಗೆ ನೈತಿಕ ಪಾಠಗಳನ್ನು ಕಲಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು.ಇಲ್ಲದಿದ್ದರೆ, ತಮ್ಮ ಮಕ್ಕಳು ಮೌಲ್ಯಗಳನ್ನು ಅಳವಡಿಸಿಕೊಳ್ಳದೇ ಎಷ್ಟೇ ವಿದ್ಯಾವಂತರಾದರೂ ಭ್ರಷ್ಟಾಚಾರದಿಂದ ಮುಕ್ತಿ ಹೊಂದಲು ಸಾಧ್ಯವಿಲ್ಲ. ನಾನು ಲೋಕಾಯುಕ್ತದಲ್ಲಿದ್ದಾಗ ಮೂರು ಮಂದಿ ಮುಖ್ಯಮಂತ್ರಿಗಳು, ಎಂಟು ಮಂದಿ ಮಂತ್ರಿಗಳು ಹಾಗೂ 156 ಮಂದಿ ಭ್ರಷ್ಟ ಅಧಿಕಾರಿಗಳ ವಿರುದ್ಧ ವರದಿ ನೀಡಿದ್ದೇ. ಆದರೆ, ಸರ್ಕಾರಗಳು ನನ್ನ ವರದಿಯನ್ನು ಸರಿಯಾಗಿ ಅನುಷ್ಠಾನ ಮಾಡಲಿಲ್ಲ. ಇದರಿಂದ ಭ್ರಷ್ಟರು ರಾಜಾರೋಷವಾಗಿ ಓಡಾಡಿಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ಬಿಹಾರ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿದೆ. ಎಲ್ಲಾ ಪಕ್ಷಗಳಿಂದ ಅಭ್ಯರ್ಥಿಗಳಾಗಿ ಘೋಷಣೆ ಮಾಡಿರುವ 100ರಲ್ಲಿ 63 ಅಭ್ಯರ್ಥಿಗಳು ಕ್ರಿಮಿನಲ್ ಹಿನ್ನಲೆಯುಳ್ಳವರಾಗಿದ್ದಾರೆ. ಹಾಗೆಯೇ ಸಂಸದರಲ್ಲಿ 270 ಮಂದಿ ಕ್ರಿಮಿನಲ್‌ಗಳು. ಹಿರಿಯರು ಸೃಷ್ಟಿಸಿರುವ ಭ್ರಷ್ಟಾಚಾರ ಸಮಾಜವನ್ನು ಮುಕ್ತಗೊಳಿಸಬೇಕಾದರೆ, ಅದು ಯುವ ಸಮೂಹದಿಂದ ಮಾತ್ರ ಸಾಧ್ಯ ಎಂದರು.

ರಾಜ್ಯ ಸರಕಾರದ ಕೈ ಮಗ್ಗ ಮತ್ತು ಜವಳಿ ಇಲಾಖೆಯ ಆಯುಕ್ತೆ ಕೆ.ಜ್ಯೋತಿ ಮಾತನಾಡಿ, ಜನರಲ್ಲಿ ಅಸಹನೆ, ಕೋಪದೊಂದಿಗೆ ಪ್ರತಿ ಸ್ಪರ್ಧೆ ಮನೋಭಾವ ಹೆಚ್ಚಾಗಿ, ಕಾನೂನಿನ ಭಯವೇ ಇಲ್ಲದಂತಾಗಿದೆ. ಹಣ ಸಂಪಾದನೆಯೇ ಯಶಸ್ಸು ಎಂಬಂತೆ ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿದೆ. ಇದು ಮೌಲ್ಯಗಳ ಕುಸಿತದ ಸಂಕೇತವಾಗಿದೆ. ಅಂಬೇಡ್ಕರ್ ಅವರನ್ನು ಹೊಗಳುವ ಭರದಲ್ಲಿ ದಲಿತರ ಸೂರ್ಯ ಎನ್ನುತ್ತೇವೆ. ಈ ಹೇಳಿಕೆ ಅವರ ಜ್ಞಾನ ಸಂಪತ್ತಿಗೆ ಮಾಡುವ ಅಪಮಾನ ಹಾಗೂ ಅವರನ್ನು ಕೇವಲ ಒಂದು ಜಾತಿಗೆ ಸಿಮೀತಗೊಳಿಸುವುದು ಕೂಡ ಅಪರಾಧದ ಮನೋಭಾವ. ಅವರು ಜಗತ್ತಿಗೆ ಬೆಳಕು ನೀಡಿದ ಸೂರ್ಯ. ಅವರನ್ನು ಯಾವುದೋ ಒಂದು ಜಾತಿಗೆ ಸಿಮೀತಗೊಳಿಸದಂತೆ ಸಭಿಕರಲ್ಲಿ ಮನವಿ ಮಾಡಿದರು.

**ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ:** ಈ ವೇಳೆ ಹಿರಿಯ ಸಾಹಿತಿ ಡಾ.ಸಿ.ನಾಗಣ್ಣ, ಡಿ.ದೇವರಾಜಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಸಿಎಫ್‌ಟಿಆರ್‌ಐ ಎಸ್ಸಿ, ಎಸ್ಟಿ ವರ್ಗಗಳ ನೌಕರರ ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಶಿವಪ್ಪ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿದರು. ಸಿಎಫ್‌ಟಿಆರ್‌ಐ ನಿರ್ದೇಶಕ ಡಾ.ಗಿರಿಧರ್ ಪರ್ವತಂ, ಸಿಎಫ್‌ಟಿಆರ್‌ಐನ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಸ್ವಾಮಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಅಹಿಂದ ಜವರಪ್ಪ ಇದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪಿ.ಶ್ವೇತಾ ಆರ್.ರಾಧಾ, ಎಂ.ಜಮುನಾ, ಸಿ.ಸ್ನೇಹ, ಯು. ರಾಕೇಶ್, ಕೆ.ಸುಸ್ಮಿತಾ, ಎಸ್. ಐಶ್ವರ್ಯ, ಪಿ.ಆಕಾಶ್, ಮಂಜುಳಾ, ಸುಧಾ, ವಿ.ಅನನ್ಯ, ಸಿಂಚನ, ಲಕ್ಷ್ಮಿ, ಎಂ.ನಂದನ್, ಪಿ.ಪ್ರಿಯಾ, ಪಿ. ಅಂಜಲಿ, ಭೂಮಿಕಾ, ಎ.ಸಂಜನಾ, ಡಿ.ನಾಗರಾಜ, ಎಂ.ಯಮುನಾ, ಎಸ್.ಭಾವನ, ಜಿ.ಎಂ. ಕಿಶೋರ್, ಜಿ.ದಿವ್ಯ, ಎಂ.ಕೆ.ಗೀತ ಅವರನ್ನು ಅಭಿನಂದಿಸಲಾಯಿತು.

---

## ಪರಿಶಿಷ್ಠ ಜಾತಿ, ಪಂಗಡಗಳ ನೌಕರರ ಸಂಘದಿಂದ ಅಂಬೇಡ್ಕರ್ ಜಯಂತಿ

# ಅಂಬೇಡ್ಕರ್ ತತ್ವ ಅನುಸರಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಸುಂದರ ಭಾರತ ನಿರ್ಮಾಣಕ್ಕೆ ಅಂಬೇಡ್ಕರ್ ತತ್ವಗಳನ್ನು ಅನುಸರಿಸುವುದು ಅಗತ್ಯ' ಎಂದು ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಪ್ರತಿಪಾದಿಸಿದರು.

ನಗರದ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡಗಳ ನೌಕರರ ಕ್ಷೇಮಾಭಿವೃದ್ಧಿ ಸಂಘವು ಮಂಗಳವಾರ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದರು.

'ಬಾಬಾ ಸಾಹೇಬರು ಕ್ರೂರ ಸಾಮಾಜಿಕ ವ್ಯವಸ್ಥೆಯಲ್ಲಿದ್ದುಕೊಂಡೇ ಉನ್ನತ ಸ್ಥಾನಕ್ಕೇರಿದರು. ಅವರು ನೀಡಿದ ಸಂವಿಧಾನದ ನೆರಳಿನಲ್ಲಿ ನಾವು ಸುಂದರ ಬದುಕು ಕಟ್ಟಿಕೊಂಡಿದ್ದೇವೆ. ದೇಶ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದೆ' ಎಂದರು.




ಮೈಸೂರಿನಲ್ಲಿ ಆಯೋಜಿಸಿದ್ದ ಅಂಬೇಡ್ಕರ್ ಜಯಂತಿಯನ್ನು ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಉದ್ಘಾಟಿಸಿದರು

ಲೇಖಕ ಪ್ರೊ.ಸಿ.ನಾಗಣ್ಣ, ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನಾ ಸಮಿತಿ ಅಧ್ಯಕ್ಷ ಜಾಕೀರ್ ಹುಸೇನ್, ಸಂಘದ ಸಂಸ್ಥಾಪಕ ಅಧ್ಯಕ್ಷ ಎಸ್.ಶಿವಪ್ಪ ಅವರನ್ನು ಸನ್ಮಾನಿಸಲಾಯಿತು.

ಕೈ ಮಗ್ಗ ಮತ್ತು ಜವಳಿ ಇಲಾಖೆಯ ಆಯುಕ್ತೆ ಕೆ.ಜ್ಯೋತಿ, ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು, ಸಿಎಫ್‌ಟಿಆರ್‌ಐ ನಿರ್ದೇಶಕ ಗಿರಿಧರ್ ಪರ್ವತಂ, ಸಂಘದ ಅಧ್ಯಕ್ಷ ಶಿವಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಂ.ಚಂದ್ರಶೇಖರ್, ಅಹಿಂದ ಜವರಪ್ಪ ಪಾಲ್ಗೊಂಡಿದ್ದರು.